**ಸ್ತ್ರೀ ಶಕ್ತಿ ಯೋಜನೆಯ ಬಲವರ್ಧನೆ**

**401 (942) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) :** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯ ಅನುಷ್ಠಾನದ ವಿವರಗಳೇನು; ಸದರಿ ಗುಂಪುಗಳ ಜಿಲ್ಲಾವಾರು ಸಂಖ್ಯಾ ವಿವರಗಳು ಹಾಗೂ ಉಳಿತಾಯ ಸಾಧನೆಯ ವಿವರಗಳನ್ನು ನೀಡುವುದು;

ಆ) ಕೌಟುಂಬಿಕ ಏಳಿಗೆಯಲ್ಲಿ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಗಣನೀಯ ಪಾತ್ರ ವಹಿಸುವ ಸ್ತ್ರೀಶಕ್ತಿ ಗುಂಪುಗಳಿಗೆ ಸರ್ಕಾರದ ಪ್ರೋತ್ಸಾಹಕ ಯೋಜನೆಗಳೇನು; ಅವು ಯಾವುವು;

ಇ) ತಾಲ್ಲೂಕು ಮಟ್ಟದಲ್ಲಿ ಸ್ತ್ರೀಶಕ್ತಿ ಭವನವನ್ನು ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

**ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು) :**

ಅ) ರಾಜ್ಯದಲ್ಲಿ ಸ್ತ್ರೀಶಕ್ತಿ ಯೋಜನೆಯು 2000-01ನೇ ಸಾಲಿನಲ್ಲಿ ಜಾರಿಗೆ ಬಂದಿದ್ದು, ಈ ಯೋಜನೆಯಡಿ 1.40 ಲಕ್ಷ ಸ್ವಸಹಾಯ ಗುಂಪುಗಳನ್ನು ರಚಿಸಲಾಗಿದ್ದು, 20.73 ಲಕ್ಷ ಸದಸ್ಯರಿರುತ್ತಾರೆ. ಜಿಲ್ಲಾವಾರು ಸಂಖ್ಯಾ ವಿವರಗಳು ಹಾಗೂ ಉಳಿತಾಯ ಸಾಧನೆಯ ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಈ ದಿಸೆಯಲ್ಲಿ ಸ್ತ್ರೀಶಕ್ತಿ ಗುಂಪುಗಳನ್ನು ಪ್ರೋತ್ಸಾಹಿಸಲು ಪ್ರತೀ ವರ್ಷ ಈ ಕೆಳಕಂಡ ಸಂಖ್ಯೆಯಲ್ಲಿ ಅತ್ಯುತ್ತಮ ಸ್ತ್ರೀಶಕ್ತಿ ಗುಂಪುಗಳಿಗೆ ಪ್ರಶಸ್ತಿ ನೀಡಲಾಗುತ್ತಿದೆ.

| | |
|---|---|
| ತಾಲ್ಲೂಕು | 175 |
| ಜಿಲ್ಲೆ | 29 |
| ರಾಜ್ಯ | 07 |

ಹಾಗೂ ತಾಲ್ಲೂಕು– ಸ್ತ್ರೀಶಕ್ತಿ ಭವನ/ಮಾರುಕಟ್ಟೆ ಮಳಿಗೆಗಳನ್ನು ನಿರ್ಮಿಸಲಾಗುತ್ತಿದೆ. ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ಕೂಡ ನೀಡಲಾಗುತ್ತಿದೆ.

ಇ) ಹೌದು, 18 ತಾಲ್ಲೂಕು ಸ್ತ್ರೀಶಕ್ತಿ ಭವನಗಳು ಈಗಾಗಲೇ ಪೂರ್ಣಗೊಂಡಿರುತ್ತದೆ. 81 ತಾಲ್ಲೂಕು ಸ್ತ್ರೀಶಕ್ತಿ ಮಳಿಗೆ ನಿರ್ಮಾಣಕ್ಕಾಗಿ ಅನುದಾನವನ್ನು ಬಿಡುಗಡೆಗೊಳಿಸಲಾಗಿದೆ.

ಅನುಬಂಧ

| ಕ್ರಮ ಸಂಖ್ಯೆ | ಜಿಲ್ಲೆಗಳ ಹೆಸರು | ಒಟ್ಟು ಗುಂಪುಗಳ ಸಂಖ್ಯೆ | ಒಟ್ಟು ಉಳಿತಾಯ ಕೋಟಿಗಳಲ್ಲಿ |
|---|---|---|---|
| 1 | ಬೆಂಗಳೂರು (ನಗರ) | 5021 | 43.86 |
| 2 | ಬೆಂಗಳೂರು (ಗ್ರಾ) | 3317 | 23.10 |
| 3 | ಬಾಗಲಕೋಟೆ | 4000 | 26.30 |
| 4 | ಬೆಳಗಾಂ | 14492 | 58.18 |
| 5 | ಬಳ್ಳಾರಿ | 5510 | 31.84 |
| 6 | ಬೀದರ್ | 3068 | 23.82 |
| 7 | ಬಿಜಾಪುರ | 3821 | 17.89 |
| 8 | ಚಾಮರಾಜನಗರ | 3800 | 21.06 |
| 9 | ಚಿಕ್ಕಮಗಳೂರು | 3052 | 20.68 |
| 10 | ಚಿಕ್ಕಬಳ್ಳಾಪುರ | 4700 | 25.13 |
| 11 | ಚಿತ್ರದುರ್ಗ | 4948 | 33.85 |
| 12 | ದಾವಣಗೆರೆ | 4704 | 30.87 |
| 13 | ದಕ್ಷಿಣ ಕನ್ನಡ | 3870 | 24.90 |
| 14 | ಧಾರವಾಡ | 3114 | 14.73 |
| 15 | ಗದಗ್ | 3267 | 12.90 |
| 16 | ಗುಲ್ಬರ್ಗ | 9063 | 58.17 |
| 17 | ಹಾಸನ | 6318 | 41.50 |
| 18 | ಹಾವೇರಿ | 4670 | 28.61 |
| 19 | ಕೊಡಗು | 981 | 8.45 |
| 20 | ಕೋಲಾರ | 4122 | 19.82 |
| 21 | ಕೊಪ್ಪಳ | 2830 | 12.41 |

| | | | |
|---|---|---|---|
| 22 | ಮಂಡ್ಯ | 6482 | 55.83 |
| 23 | ಮೈಸೂರು | 6456 | 35.58 |
| 24 | ರಾಯಚೂರು | 4982 | 21.57 |
| 25 | ರಾಮನಗರ | 4592 | 32.85 |
| 26 | ಶಿವಮೊಗ್ಗ | 4144 | 24.18 |
| 27 | ತುಮಕೂರು | 9787 | 57.04 |
| 28 | ಉಡುಪಿ | 2759 | 19.06 |
| 29 | ಉತ್ತರ ಕನ್ನಡ | 2130 | 11.07 |
| | **ಒಟ್ಟು** | **140000** | **835.25** |

**ಮಕ್ಕಳ ಹಕ್ಕುಗಳ ಕುರಿತಾದ ರಕ್ಷಣಾ ನಿಯಮಗಳು**

**402 (943) ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) :** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗಕ್ಕಾಗಿ ಸರ್ಕಾರ ನಿಯಮಗಳನ್ನು ರೂಪಿಸಿದೆಯೇ; ಅದರಲ್ಲಿ ಅಡಕವಾಗಿರುವ ಪ್ರಮುಖವಾದ ಅಂಶಗಳೇನು;

ಆ) ಸದರಿ ಆಯೋಗವು ಸುವ್ಯವಸ್ಥಿತವಾಗಿ ಹಾಗೂ ಪರಿಣಾಮ ಕಾರಿಯಾಗಿ ಕಾರ್ಯನಿರ್ವಹಣೆ ಮಾಡುವಂತಾಗಲು ಪೂರಕ ಮತ್ತು ಪ್ರೋತ್ಸಾಹಕವಾದ ಕ್ರಮ-ನಿಯಮಗಳನ್ನು ರೂಪಿಸಲು ಸರ್ಕಾರ ಮುಂದಾಗುವುದೇ;

ಇ) ಸರ್ಕಾರದ ನಿಗದಿತ ನಿಯಮಗಳನುಸಾರ ಆಯೋಗದ ಹಕ್ಕು-ಬಾಧ್ಯತೆಗಳೇನು?

**ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖಾ ಸಚಿವರು) :**

ಅ) ಕರ್ನಾಟಕ ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ನಿಯಮಗಳು 2010ನ್ನು ರೂಪಿಸಲಾಗಿದೆ ಇದರಲ್ಲಿ ಅಧ್ಯಕ್ಷರು ಮತ್ತು ಇದರ ಸದಸ್ಯರ ನೇಮಕಾತಿಯ ಅರ್ಹತೆಯ ಮಾನದಂಡಗಳು, ಸದಸ್ಯ ಕಾರ್ಯದರ್ಶಿಯವರ ಅಧಿಕಾರ ಮತ್ತು ಕರ್ತವ್ಯಗಳು, ಅಧ್ಯಕ್ಷರು ಮತ್ತು